ದಿನಾಂಕ 11-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ಶ್ರೀ ಮುರಳಿ, ವಕೀಲರಿಂದಃ-

ನಾನು ಎಂ.ಸಿ.ಎ., ಮಾಡಿದ್ದೇನೆ. ರಾಮನಗರ ರೈಲ್ವೆ ನಿಲ್ದಾಣದಲ್ಲಿ ರೈಲು ಸುಮಾರು 15 ನಿಮಿಷಗಳ ಕಾಲ ನಿಂತಿತ್ತು. ಈ ವಿಚಾರವನ್ನು ದೂರಿನಲ್ಲಿ ಬರೆಸಿಲ್ಲ. ರಾಮನಗರ ರೈಲ್ವೆ ನಿಲ್ದಾಣದಲ್ಲಿ ಎಷ್ಟು ಜನ ಪ್ರಯಾಣಿಕರು ಹತ್ತಿದರು ಎಂದು, ಎಷ್ಟು ಜನ ಇಳಿದರು ಎಂದು ನಾನು ನೋಡಿಲ್ಲ. ದೂರನ್ನು ಅದೇ ದಿನ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ನಮ್ಮ ಮನೆಯವರಿಗೆ ತಿಳಿಸಬೇಕಿತ್ತು, ಆದ್ದರಿಂದ ದಿನಾಂಕ 27.02.2019ಕ್ಕೆ ದೂರು ಕೊಟ್ಟೆ ಎಂದು ನುಡಿಯುತ್ತಾರೆ. ದೂರನ್ನು ನಾನೇ ಬರೆದುಕೊಟ್ಟೆ. ನನ್ನ ಕತ್ತಿನಿಂದ ಚಿನ್ನದ ಸರವನ್ನು ಕಿತ್ತುಕೊಂಡು ಓಡಿ ಹೋದ ವ್ಯಕ್ತಿಯನ್ನು ಮುಖಾಮುಖಿ ಸ್ಪಷ್ಟವಾಗಿ ನೋಡಲಿಲ್ಲ, ಆದರೆ ಆತನ ದೇಹದಾರ್ಢ್ಯತೆ ನೋಡಿದೆ. ಈ ವಿಚಾರವನ್ನು ದೂರಿನಲ್ಲಿ ಹೇಳಿದ್ದೇನೆ. ನನ್ನ ಚಿನ್ನದ ಸರವನ್ನು ಕಿತ್ತುಕೊಂಡು ಹೋದ ವ್ಯಕ್ತಿ ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನೋಡಲಿಲ್ಲ. ದೂರನ್ನು ಮಧ್ಯಾಹ್ನ ಹೋಗಿ ಕೊಟ್ಟೆ. ದೂರಿನಲ್ಲಿ ಏನು ಬರೆದಿದ್ದೇನೆ ಎಂದು ನನಗೆ ಗೊತ್ತೇ ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪಂಚನಾಮೆಗೆ ಪೊಲೀಸರು ನನಗೆ ದೂರವಾಣಿ ಕರೆ ಮಾಡಿ ಠಾಣೆಗೆ ಬರುವಂತೆ ಹೇಳಿದರು. ಪೊಲೀಸರು ಪೊಲೀಸ್ ಠಾಣೆಯಲ್ಲಿ ಆಸಾಮಿಯನ್ನು ತೋರಿಸಿ ಈತನೇ ಎಂದು ಹೇಳಿದ್ದಕ್ಕೆ ನೀವು ಗುರುತಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಆ ಆಸಾಮಿಯ ಎತ್ತರ, ದೇಹದಾರ್ಢ್ಯತೆಯ ಬಗ್ಗೆ ವಿವರ ನೀಡಿದೆ, ಅವರು ಫೋಟೋ ತೋರಿಸಿದರು ಆ ಆಸಾಮಿ ಫೋಟೋದಲ್ಲಿ ಇದ್ದ ವ್ಯಕ್ತಿಯೇ ಆಗಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನ್ಯಾಯಾಲಯದ ಮುಂದೆ ವಿ.ಸಿ. ಮುಖಾಂತರ ಹಾಜರಾಗಿರುವ ಆರೋಪಿ ಠಾಣೆಯಲ್ಲಿ ಇರಲಿಲ್ಲ.

ಮಹಜರ್ ಕಾಲಕ್ಕೆ ನಾನೊಬ್ಬಳೇ ಹೋಗಿದ್ದೆ. ಮಹಜರ್ ಗೆ ಬೇರೆ ಯಾರು ಸಹಿ ಹಾಕಿದರು ಎಂದು ಗೊತ್ತಿಲ್ಲ. ನಾನು ಪಂಚನಾಮೆಯ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಚಿನ್ನದ ಸರ ನನ್ನದೇ ಎಂದು ತೋರಿಸಲು ಪೊಲೀಸರಿಗೆ ರಶೀದಿ ಕೊಟ್ಟಿದ್ದೆ. ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದ್ದು ಮಧ್ಯಾಹ್ನ ಪೊಲೀಸ್ ಠಾಣೆಯಲ್ಲಿ. ದಿನಾಂಕ 27.02.2019ರಂದು ಮಹಜರ್ ಮಾಡಿದ್ದು. ಪೊಲೀಸರು ನನ್ನ ಸಮಕ್ಷಮ ಚಿನ್ನದ ಸರದ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.